**ಅಕಾಡೆಮಿಯಿಂದ ಕೊಡಮಾಡುವ "ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿ" ಗೆ ನಿಗದಿಪಡಿಸಿರುವ ಮಾನದಂಡಗಳ ವಿವರ::**

1. 2022 ನೇ ಜನೇವರಿಯಿಂದ 2022 ನೇ ಡಿಸೆಂಬರ್ ವರೆಗಿನ ಅವಧಿಯಲ್ಲಿ ಪ್ರಕಟಗೊಂಡ ಪುಸ್ತಕ ಕೃತಿಗಳಾಗಿರಬೇಕು.

2. ಈ ಪ್ರಶಸ್ತಿಗೆ 18 ವರ್ಷದ ಒಳಗಿನ ಮಕ್ಕಳು, ಮಕ್ಕಳಿಗಾಗಿ ಆಯಾ ವರ್ಷದ ಅವಧಿಯಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ ಕಥೆ, ಕಾವ್ಯ ಕೃತಿಗಳಿದ್ದಲ್ಲಿ ಅಂಥಹ ಕೃತಿಗಳನ್ನೂ ಸಹ ಮಕ್ಕಳ ಚಂದಿರ ಪ್ರಶಸ್ತಿಗೆ ಪರಿಗಣಿಸಲಾಗುವುದು.

3. ಸ್ವ-ರಚಿತ ಕವನ ಸಂಕಲನ, ಕಥಾ ಸಂಕಲನ, ನಾಟಕ (ಪಠ್ಯಾಧಾರಿತ ಬಿಟ್ಟು), ಮಕ್ಕಳ ಕಾದಂಬರಿ, ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ (ಯಾವುದೇ ಪ್ರಕಾರದ ಮಕ್ಕಳ ಸಾಹಿತ್ಯ), ಮಕ್ಕಳ ಸಾಹಿತ್ಯ ವಿಮರ್ಶೆ ಕೃತಿ ಹೀಗೆ 07 ಪ್ರಕಾರದ ಮಕ್ಕಳ ಸಾಹಿತ್ಯದ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸುವುದು. ಪ್ರತಿಯೊಂದು ಕೃತಿಯ ನಾಲ್ಕು ಪ್ರತಿಗಳನ್ನು ಕಳಿಸತಕ್ಕದ್ದು.

4. ಲೇಖಕರು ಹಾಗೂ ಪ್ರಕಾಶಕರಿಂದ ಪುಸ್ತಕಗಳನ್ನು ಪ್ರಶಸ್ತಿಗೆ ಕಳುಹಿಸಬಹುದು. ಪ್ರಕಾಶಕರು ಕೃತಿಗಳನ್ನು ಕಳಿಸಿದರೂ ಪ್ರಶಸ್ತಿಯನ್ನು ಆ ಕೃತಿಯ ಲೇಖಕರಿಗೆ ನೀಡಲಾಗುವುದು.

5. ಪ್ರಶಸ್ತಿಗೆ ಸ್ವೀಕರಿಸಲ್ಪಡುವ ಪುಸ್ತಕಗಳನ್ನು ಆಯಾ ಪ್ರಕಾರಗಳಲ್ಲಿ ಪರಿಣಿತರನ್ನು ಮೌಲ್ಯಮಾಪಕರನ್ನಾಗಿ ಗುರುತಿಸಿ ಪುಸ್ತಕಗಳನ್ನು ಮೌಲ್ಯಮಾಪನಗೊಳಿಸಿ, ಅವರು ನೀಡಿದ ಮೌಲ್ಯಾಂಕಗಳ ಆಧಾರದ ಮೇಲೆ ಆಯ್ಕೆ ಪರಿಶೀಲನಾ ಸಮಿತಿಯಲ್ಲಿ ಪರಿಶೀಲಿಸಿ ಪುಸ್ತಕಗಳನ್ನು ಪ್ರಶಸ್ತಿಗೆ ಆಯ್ಕೆಗೊಳಿಸಲಾಗುವುದು. ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

6. ಈ ಪ್ರಶಸ್ತಿಗೆ ಈ ಮೊದಲು ಭಾಜನರಾದವರು ಪುನಃ ಪ್ರಶಸ್ತಿಗೆ ಪುಸ್ತಕಗಳನ್ನು ಕಳುಹಿಸಿಕೊಟ್ಟಲ್ಲಿ ಅಂಥಹ ಪುಸ್ತಕಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ.